DECEMBER 2022 **U/ID 30704/ULC2A**

Time : Three hours Maximum : 75 marks

PART A — (10 × 2 = 20 marks)

ಕೆಳಗಿನವುಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. ಉತ್ತರದ ಮಿತಿ 30 ಪದಗಳು.

1. ಬೆಳಗಾದಾಗ, ಹಕ್ಕಿಗಳ ಚಿಲಿಪಿಲಿ ಧ್ವನಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

2. ಸಿಬ್ಬಲುಗುಡ್ಡೆ

3. 'ಮನೆ ತುಂಬಿಸುವುದು' ಕವನದಲ್ಲಿ ಮಗಳಿಗೆ ಹೇಳುವ ಹಿತೋಪದೇಶಗಳು.

4. ನಲ್ಲಿಯ ಬಳಿ ಮಲ್ಲಿಯ ನಿಯಮಗಳೇನು?

5. ತುಂಗಭದ್ರೆಯ ತುಂಟಾಟಗಳು.

6. ಕುರುಡು ಕಾಂಚಾಣ ಹೇಗೆ ಕುಣಿಯುತ್ತಿತ್ತು?

7. 'ಮಲೆನಾಡಿನ ಜನ'ರನ್ನು ನಾಡಿನುದ್ದಾರಕ್ಕೆ ಕರೆಯುವಾಗ ಕವಿ ಹೇಗೆ ಆಹ್ವಾನಿಸುತ್ತಾರೆ?

8. ರತ್ನ 'ಸೂರ್ಯಾಸ್ತ' ವನ್ನು ಯಾವುದಕ್ಕೆ ಹೋಲಿಸುತ್ತಾನೆ?

9. ನಿರೂಪಕರ ತಾಯಿ ಹುಡುಗಿಯರನ್ನು ತಿರಸ್ಕರಿಸಲು ನೀಡುವ ಕಾರಣಗಳು.

10. 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ವರ್ಣಿತವಾಗಿರುವ ಬಾಲ್ಯದ ಚಿತ್ರಣ

11. 'ನಾಗಿ' ದುಃಖಿಸಿದ್ದೇಕೆ?

12. ಅಂಗುಲ ಹುಳುವಿನ ಸ್ವರೂಪವನ್ನು ವಿವರಿಸಿ.

PART B — (5 × 5 = 25 marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರದ ಮಿತಿ 200 ಪದಗಳು.

13. 'ಗಿಡಗಂಟಿಯೂ ಕೊರಳೊಳಗಿಂದ ಹಕ್ಕಿಗಳಾ ಹಾಡು' - ಸಂದರ್ಭದೊಂದಿಗೆ ವಿವರಿಸಿ.

14. ಶರತ್ ಕಾಲವನ್ನು ಕವಿ ಹೇಗೆ ವರ್ಣಿಸಿದ್ದಾರೆ?

15. 'ಕೊಳ್ಳಿರೀ ಮಗುವನ್ನು, ಎಮ್ಮ ಮನೆ ಬೆಳಕನ್ನು' - ಸಂದರ್ಭದೊಂದಿಗೆ ವಿವರಿಸಿ.

16. 'ತುಂಗಭದ್ರೆಯ ಹಡಗು ಚಂದಿರನ ಹೊತ್ತು ಓಡಾಡುವುದು'. - ಸಂದರ್ಭದೊಂದಿಗೆ ವಿವರಿಸಿ.

17. 'ಬಾಣಂತಿಯೆಲುಬಿನ ಸಾಬಾಣದ ಬಿಳುಪಿನ ಕಾಣಾದ ಕೆರುಗೆಜ್ಜೆ ಕಾಲಾಗ ಇತ್ತೋ' - ಸಂದರ್ಭದೊಂದಿಗೆ ವಿವರಿಸಿ

18. 'ಎಲ್ರಂಗೇ ಮನ್ಸ – ಇವನೇನೋ ಒಸಿ ತಪ್ಪಾಂತ ಅನ್ನಲ್ಲ' - ಸಂದರ್ಭದೊಂದಿಗೆ ವಿವರಿಸಿ.

19. 'ಮಬ್ಬಿನಿಂದ ಮಬ್ಬಿಗೆ' ಕವನದ ಆಶಯ.

PART C — (3 × 10 = 30 marks)

ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರದ ಮಿತಿ 200 ಪದಗಳು.

24ನೇ ಪ್ರಶ್ನೆ ಕಡ್ಡಾಯ.

20. ಪ್ರಗತಿಪರ ಮನೋಭಾವ ಮತ್ತು ಸಾಂಪ್ರದಾಯಿಕತೆಯ ಮುಖಾಮುಖಿಯನ್ನು 'ಅಮ್ಮ, ಆಚಾರ, ನಾನು' ಕವನದಲ್ಲಿ ಹೇಗೆ ನಿರೂಪಿಸಲಾಗಿದೆ?

21. 'ಓ! ನನ್ನ ಜನವೇ!' – ಕವನದಲ್ಲಿ ಮೂಡಿ ಬಂದಿರುವ ಕನ್ನಡ ನಾಡಿನ ವರ್ಣನೆ.

22. 'ಮನೆ ತುಂಬಿಸುವುದು' ಕವನದ ಭಾವುಕತೆಯನ್ನು ವರ್ಣಿಸಿ.

23. 'ಕಾಲ ನಿಲ್ಲುವುದಿಲ್ಲ' ಕವನದ ವೈಶಿಷ್ಟ್ಯವೇನು?

24. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಪ್ರಬಂಧ ಬರೆಯಿರಿ.

(ಅ) ಲಾಕ್‌ಡೌನಿನ ಪರಿಣಾಮಗಳು

(ಆ) ನಿಮ್ಮ ಮೆಚ್ಚಿನ ಆಟ

(ಇ) ನೋಟು ಅಮಾನ್ಯೀಕರಣ.
